12	ಸಪ್ರದಕಾ, ಯರಗಟ್ಟಿ – 591 309, ಸವದತ್ತಿ ತಾ:	2009–10	26	8	34
13	ಸಪ್ರದಕಾ, ಕಲಾದಗಿ – 587 204, ಬಾಗಲಕೋಟೆ ತಾ:	2009–10	3	22	25
14	ಸಪ್ರದಕಾ, ರಬಕವಿ ಬನಹಟ್ಟಿ – 587 314, ಜಮಖಂಡಿ ತಾ:	2009–10	23	7	30
15	ಸರಕಾರಿ ಮಹಿಳಾ ಕಾಲೇಜು, ಜೇವರ್ಗಿ ಕಾಲೋನಿ – 585 301, ಗುಲ್ಬರ್ಗಾ	2007–08	0	19	19
16	ಸಪ್ರದಕಾ, ಜಾಲಹಳ್ಳಿ – 584 116, ದೇವದುರ್ಗ ತಾ:	2007–08	27	11	38
17	ಸಪ್ರದಕಾ, ಹಿಟ್ನಾಳ – 583 234, ಕೊಪ್ಪಳ ತಾ:	2007–08	26	12	38
18	ಸಪ್ರದಕಾ, ಹಿರೇವಂಕಲಕುಂಟ, ಯಲಬುರ್ಗಾ ತಾ:	2007–08	8	12	20
19	ಸಪ್ರದಕಾ, ಮೋಕ – 583 117, ಬಳ್ಳಾರಿ	2007–08	19	9	28

ಒಳನಾಡು ಮೀನುಗಾರಿಕೆಗೆ ಪ್ರೋತ್ಸಾಹ ಯೋಜನೆ

752 (916) ಶ್ರೀ ಹ್ಯಾರೀಸ್ ಎನ್.ಎ. (ಶಾಂತಿನಗರ) : ಮಾನ್ಯ ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಒಳನಾಡು ಮೀನುಗಾರಿಕೆಯನ್ನು ವೃದ್ಧಿಪಡಿಸಲು ಸರಕಾರ ಹಮ್ಮಿಕೊಂಡ ಯೋಜನೆಗಳು ಯಾವುವು;

ಆ) ಪ್ರಸ್ತುತ ಒಳನಾಡು ಮೀನುಗಾರಿಕೆಯಲ್ಲಿ ತೊಡಗಿಸಿಕೊಂಡ ಮೀನುಗಾರರ ಸಂಖ್ಯೆ ಎಷ್ಟು; ಮೀನುಗಾರರ ಎಷ್ಟು ಸಹಕಾರ ಸಂಘಗಳು ಒಳನಾಡು ಮೀನುಗಾರಿಕೆಯಲ್ಲಿ ಕಾರ್ಯ ನಿರತವಾಗಿದೆ;

ಇ) ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿರುವ ಎಷ್ಟು ಕೆರೆಗಳಲ್ಲಿ ಮೀನುಗಾರಿಕೆ ಅವಕಾಶ ಮಾಡಿಕೊಡಲಾಗಿದೆ;

ಈ) ಒಳನಾಡು ಮೀನುಗಾರಿಕೆಯಲ್ಲಿ ತೊಡಗಿರುವ ವಸತಿ ಮತ್ತಿತರ ಸೌಲಭ್ಯಗಳನ್ನು ಒದಗಿಸಿಕೊಡಲು ಸರಕಾರ ಕೈಗೊಂಡ ಕ್ರಮಗಳೇನು?

ಶ್ರೀ ಆನಂದ ವಸಂತ ಅಸ್ನೋಟಿಕರ (ಮೀನುಗಾರಿಕೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು) :

ಅ) ಒಳನಾಡು ಮೀನುಗಾರಿಕೆಯನ್ನು ವೃದ್ಧಿಪಡಿಸಲು ಸರಕಾರ ಹಮ್ಮಿಕೊಂಡಿರುವ ಯೋಜನೆಗಳು ಈ ಕೆಳಕಂಡಂತಿವೆ:

- ರಾಜ್ಯದಲ್ಲಿರುವ ಜಲಸಂಪನ್ಮೂಲಗಳ ಮೀನು ಪಾಶುವಾರು ಹಕ್ಕನ್ನು ವಿವಿಧ ಸಂಘ/ಸಂಸ್ಥೆಗಳಿಗೆ ಗುತ್ತಿಗೆ ನೀಡುವುದು ಅಥವಾ ಟೆಂಡರ್–ಕಂ–ಹರಾಜು ಮೂಲಕ ವಿಲೇವಾರಿ ಮಾಡಿ ಅಭಿವೃದ್ಧಿಪಡಿಸುವುದು.
- ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಪ್ರೋತ್ಸಾಹಕ ಯೋಜನೆಗಳು.
  - ಖಾಸಗಿ ಕ್ಷೇತ್ರದಲ್ಲಿ ಮೀನುಕೊಳ ನಿರ್ಮಾಣಕ್ಕೆ ಸಹಾಯಧನ.
  - ಮೀನುಗಾರರಿಗೆ ಮೀನುಗಾರಿಕೆ ಸಲಕರಣೆಗಳನ್ನು ಕೊಳ್ಳಲು ಸಹಾಯಧನ.
  - ಹುಲ್ಲುಗೆಂಡೆ ಮೀನುಮರಿ ಸರಬರಾಜಿಗೆ ಸಹಾಯಧನ.
  - ಬಾವಿ ಮತ್ತು ಹೊಂಡಗಳಲ್ಲಿ ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯಧನ.
  - ಸಿಹಿನೀರು ಸೀಗಡಿ ಕೃಷಿಗೆ ಸಹಾಯಧನ.
- ಮೀನುಮರಿ ಖರೀದಿಗೆ ಸಹಾಯ.
- ಕೇಂದ್ರ ಪುರಸ್ಕೃತ ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಗಳ ಮುಖಾಂತರ ಒಳಾಡು ಮೀನುಗಾರಿಕೆಯ ಅಭಿವೃದ್ಧಿ.
- "ಮತ್ಸ್ಯ ಮಹಿಳಾ ಸ್ವಾವಲಂಬನಾ" ಯೋಜನೆ.
- ಮೀನುಗಾರಿಕೆ ಸಲಕರಣೆ ಕಿಟ್ಟುಗಳ ವಿತರಣೆ.
- ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿಯ ನೆರವಿನ ಯೋಜನೆಗಳು.

- ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಮೀನುಮರಿ ಉತ್ಪಾದನಾ ಕೇಂದ್ರಗಳ ಅಭಿವೃದ್ಧಿ.
- ಮೀನು ಮಾರುಕಟ್ಟೆ ನಿರ್ಮಾಣಕ್ಕೆ ಸಹಾಯಧನ.
- ಮೀನು ಮಾರಾಟಕ್ಕೆ ಸೈಕಲ್ ಮತ್ತು ಐಸ್‌ಬಾಕ್ಸ್, ಮೊಪೆಡ್ ಮತ್ತು ಐಸ್‌ಬಾಕ್ಸ್, ತ್ರಿಚಕ್ರ ವಾಹನ ಮತ್ತು ನಾಲ್ಕು ಚಕ್ರ ವಾಹನ ಖರೀದಿಲು ಸಹಾಯಧನ.

ಆ) ಪ್ರಸ್ತುತ ಒಳನಾಡು ಮೀನುಗಾರಿಕೆಯಲ್ಲಿ ತೊಡಗಿಸಿಕೊಂಡ ಮೀನುಗಾರರ ಸಂಖ್ಯೆ 1.16 ಲಕ್ಷ ಒಳನಾಡು ಮೀನುಗಾರಿಕೆಯಲ್ಲಿ 362 ಮೀನುಗಾರರ ಸಹಕಾರ ಸಂಘಗಳು ಕಾರ್ಯನಿರತವಾಗಿವೆ.

ಇ) ಬೆಂಗಳೂರು ನಗರದಲ್ಲಿ 148 ಮತ್ತು ಗ್ರಾಮಾಂತರ ಜಿಲ್ಲೆಯಲ್ಲಿ 50 ಇಲಾಖಾ ಕೆರೆಗಳಲ್ಲಿ ಮೀನುಗಾರಿಕೆಗೆ ಅವಕಾಶ ಮಾಡಿಕೊಡಲಾಗಿದೆ.

ಈ) ಒಳನಾಡು ಮೀನುಗಾರಿಕೆಯಲ್ಲಿ ತೊಡಗಿರುವ ವೃತ್ತಿನಿರತ ನಿರ್ವಸಿತ ಮೀನುಗಾರರಿಗೆ ವಸತಿ ಸೌಲಭ್ಯವನ್ನು ಕಲ್ಪಿಸಲು ಮತ್ಸ್ಯಾಶ್ರಯ ಯೋಜನೆಯಡಿ ರೂ. 40,000–00 ವೆಚ್ಚದಲ್ಲಿ ಮನೆ ನಿರ್ಮಾಣಕ್ಕೆ ಅವಕಾಶ ಕಲ್ಪಿಸಲಾಗಿದೆ. ವಿವಿಧ ಯೋಜನೆಗಳಡಿ ನೀಡುತ್ತಿರುವ ಇತರೆ ಸೌಲಭ್ಯಗಳನ್ನು ಮೇಲೆ ಕ್ರಮ ಸಂಖ್ಯೆ:ಅ ರಲ್ಲಿ ನಮೂದಿಸಲಾಗಿದೆ.

ಸಿ.ಇ.ಟಿ ಪ್ರವೇಶ ಶುಲ್ಕದ ವಿವರ

753 (917) ಶ್ರೀ ಹ್ಯಾರೀಸ್ ಎನ್.ಎ. (ಶಾಂತಿನಗರ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿ.ಇ.ಟಿ. ಪ್ರವೇಶ ಶುಲ್ಕವನ್ನು ಹೆಚ್ಚಿಸುವ ಕುರಿತು ಸರಕಾರದ ನಿರ್ಧಾರಗಳೇನು;

ಆ) ಪ್ರವೇಶಾರ್ಹತೆಯನ್ನು ಪಡೆಯುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸರಕಾರದ ನೆರವಿನ ನಿಯಮಗಳೇನು;

ಇ) ಸರಕಾರ ಮತ್ತು ಕಾಮೆಡ್–ಕೆ ನಡುವಿನ ಸೀಟು ಹಂಚಿಕೆ ಹಾಗೂ ಕಾಮೆಡ್–ಕೆ ಸೀಟುಗಳ ಶುಲ್ಕ ನಿಗದಿ ಕುರಿತಾದ ವಿವರಗಳೇನು;